# ಮೀನಿನ ಮಳೆ!





**ಆಕಾಶದಿಂದ ನೀರು ಮಳೆಯಾಗಿ ಸುರಿಯುವುದು ಗೊತ್ತು. ಆದರೆ ಮೀನಿನ ಮಳೆಯಾಗುವುದು ಹೇಗೆ? ಅಷ್ಟೊಂದು ಮೀನುಗಳು ಆಕಾಶಕ್ಕೆ ಅದ್ಹೇಗೆ ಹಾರಿ ಹೋಗುತ್ತವೆ?**

■ ನಿಸರ್ಗ ಎಚ್. ಮಲ್ಲಿಗೆರೆ



ಚಿಕ್ಕವರಿದ್ದಾಗ ಆಕಾಶದಿಂದ ನಕ್ಷತ್ರ ಧರೆಗಿಳಿದ ಚಂದದ ಕಥೆ ಕೇಳಿರುತ್ತೇವೆ. ಮಗುವಿಗೆ ತುತ್ತುಣಿಸುವ ಅಮ್ಮ ಚಂದಮಾಮನನ್ನೂ ಒಮ್ಮೆ ಬಂದು ಹೋಗು ಎಂದಿರುತ್ತಾಳೆ. ಇತ್ತೀಚಿನ ವರ್ಷಗಳಲ್ಲಿ ಹಾರುವ ತಟ್ಟೆಯಂಥ ವಸ್ತುಗಳು, ಅನ್ಯಗ್ರಹ ಜೀವಿಗಳು ಭೂಮಿಗೆ ಇಳಿದವೆಂದು ಕೇಳಿರುತ್ತೇವೆ. ಆಕಾಶದಿಂದ ಮೀನುಗಳ ಮಳೆ ಸುರಿದದ್ದು ನೋಡಿದ್ದೀರಾ?

ಹೌದು! ಮೀನಿನ ಮಳೆ ಸುರಿದದ್ದು ಚಂದದ ಕಥೆ ಅಲ್ಲವೇ ಅಲ್ಲ. ಪ್ರಕೃತಿಯ ಒಂದು ವಿದ್ಯಮಾನ. ಇತ್ತೀಚೆಗೆ ಆಂಧ್ರ ಪ್ರದೇಶದಲ್ಲಿ ಪಶ್ಚಿಮ ಗೋದಾವರಿಯ ಕೆಲವು ಪ್ರದೇಶಗಳಲ್ಲಿ ರಾಶಿ ರಾಶಿ ಮೀನುಗಳು ಆಗಸದಿಂದ ಉದುರುವುದು ಕಂಡು ಜನ ಬೆಕ್ಕಸ ಬೆರಗಾದರು. ಆದರೆ ಸಕಾಲಿಕ ಬುದ್ಧಿ ಉಪಯೋಗಿಸಿ ಬುಟ್ಟಿ, ಕೈಚೀಲಗಳನ್ನು ತಂದು ನೆಲದ ಮೇಲೆ ಬಿದ್ದು ತುಡಿಯುತ್ತಿದ್ದ ಮೀನುಗಳನ್ನು ಬಾಚಿಕೊಂಡರು. ಅದು ಅಕ್ಷರಶಃ ಮೀನಿನ ಮಳೆಯೇ!